**ಅಸ್ಪೃಶ್ಯ ಹೆಣ್ಣು ಮಕ್ಕಳ ಮೇಲೆ ನಗರಗಳಲ್ಲಿ ನಡೆಯುತ್ತಿರುವ ಲೈಂಗಿಕ ಶೋಷಣೆಯನ್ನು ವಿರೋಧಿಸುವುದು ಕಾದಂಬರಿಕಾರರ ಮುಖ್ಯ ಧೋರಣೆ...**

ಲೋಕದ ಆತಂಕದ, ತಲ್ಲಣದ ಪ್ರತೀಕವಾಗಿ ಕಾಣಿಸುತ್ತಾನೆ. ಕ್ರೈಸ್ತ ಪಾದ್ರಿಗಳ ಲೈಂಗಿಕ ಚಿತ್ರಗಳು ಒಬ್ಬ ವರದಿಗಾರ ನೋಡುವ ನೋಟದ ಕ್ರಮಕ್ಕಿಂತ ಬೇರೆಯಾಗಿಲ್ಲ. ಅವರ ಕಥನಗಳಲ್ಲಿ ಮುಖ್ಯವಾಗಿ ಬರುವ ಸುಶಿಕ್ಷಿತ ಕಾಮುಕರ ವರ್ಣನೆಗಳು ತೀರ ಸಿಟ್ಟಿಗೆ ಕಾರಣವಾಗಿ ತನ್ನ ಕಲಾತ್ಮಕತೆಯನ್ನು ಕಳೆದುಕೊಳ್ಳುತ್ತವೆ.

ಕಥನಕಾರನಿಗೆ ತನ್ನ ಇಚ್ಛಿತ ವಸ್ತುವನ್ನು ನಿರೂಪಿಸುವಾಗ ಭಾಷೆಯ ಜೊತೆಗೆ ಬದುಕನ್ನು ವ್ಯವಧಾನದಿಂದ ಗ್ರಹಿಸುವ ತಾಳ್ಮೆ ಬೇಕಾಗುತ್ತದೆ. ಹೊಸ ತಲೆಮಾರಿನ ಬರಹಗಾರರಲ್ಲಿ ಇರಬೇಕಾದ ಅಂಶವಿದು. ಮಂಜುನಾಥ್ ಇದನ್ನು ಅಲ್ಲಲ್ಲಿ ಸಾಧಿಸಿದಂತೆ ಕಂಡರೂ ಕಾದಂಬರಿಕಾರನಿಗೆ ಬೇಕಿಲ್ಲದ ಒಳಸಿಟ್ಟಿನಿಂದ ಪಾರಾಗುವುದಿಲ್ಲ. ಅವರಿಗಿರುವ ಶಕ್ತಿ ಎಂದರೆ ನಗರದ ಮನುಷ್ಯಲೋಕದ ಅದರಲ್ಲೂ ಕೆಳ ಜಾತಿಯವರ ದುಃಖ, ದುಗುಡ, ಅಸಹಾಯಕತೆಗಳನ್ನು ಅರಿತಿರುವುದು. ಕ್ರೈಸ್ತರ ಜೀವನ ಕ್ರಮಗಳನ್ನು ದಟ್ಟವಾಗಿ ಚಿತ್ರಿಸುವ ಅವರ ಪ್ರಯತ್ನಗಳು ಸಮಗ್ರತೆಯನ್ನು ಪಡೆಯುವ ಹಾದಿಯಲ್ಲಿವೆ. ರಾಜಕೀಯ ಆಯಾಮಗಳು ಹೇಗೆ ಸಾಮಾಜಿಕ ಆವರಣದಲ್ಲಿ ಜಾಗಪಡೆದುಕೊಳ್ಳುತ್ತವೆ? ಎಂಬ ಪ್ರಶ್ನೆಯನ್ನು ಎತ್ತಿಕೊಂಡರೆ ಅದು ಇನ್ನೂ ಇವರ ಕಾದಂಬರಿಗಳಲ್ಲಿ ಸ್ಪಷ್ಟವಾಗಬೇಕಾದ ಹಾಗೂ ಸಾತತ್ಯವನ್ನು ಇನ್ನೂ ಧರಿಸಬೇಕಾದ ಹಾದಿಯಲ್ಲಿದೆ ಎನ್ನಬಹುದು.

ಮಂಜುನಾಥರು ಎತ್ತಿಕೊಳ್ಳುವ ಬಹುದೊಡ್ಡ ತಾತ್ವಿಕತೆ ಎಂದರೆ ಕಮ್ಯುನಿಸಂ ಮತ್ತು ದಲಿತ ಪ್ಯಾಂಥರ್ ಹುಡುಗರದು. ಅರವತ್ತರ ದಶಕದಲ್ಲಿ ಮರಾಠಿಯಲ್ಲಿ ಸಾಕಷ್ಟು ಸದ್ದು ಮಾಡಿದ ಪರಿಕಲ್ಪನೆಗಳಿವು. ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿಯೂ ಇವುಗಳ ಪ್ರಭಾವವನ್ನು ಮರೆಯುವ ಹಾಗಿಲ್ಲ. ಈ ಕಾದಂಬರಿಯಲ್ಲಿ ಈ ಎರಡೂ ಪರಿಕಲ್ಪನೆಗಳು ನಗರ ಬದುಕಿನ ಚೌಕಟ್ಟಿನಲ್ಲಿ ಕಾಣಿಸಿಕೊಂಡರೂ ಕಥನದ ವಸ್ತುವಿನಲ್ಲಿ ಅದು ಕರಗಬೇಕಿತ್ತು. ಇವೆಲ್ಲವನ್ನೂ ಕಲಾತ್ಮಕವಾಗಿ ಸಾಧಿಸಿದ್ದೇ ಆದಲ್ಲಿ ಮಂಜುನಾಥ್ ಬರವಣಿಗೆಯ ಪ್ರಮುಖ ಘಟ್ಟವನ್ನು ಮುಟ್ಟಬಲ್ಲರು. ಇಷ್ಟಿದ್ದರೂ ಇವರ ಬರಹ ಮುಖ್ಯವಾಗುವುದು ಕಥನದಲ್ಲಿ ಬಳಸುತ್ತಿರುವ ವಿಶಿಷ್ಟ ರೀತಿಯ ಕನ್ನಡ ನುಡಿಗಟ್ಟುಗಳ ಮೂಲಕ. ಕಾದಂಬರಿ ವಿನ್ಯಾಸದಲ್ಲಿ ಹೊಸ ಬಗೆಯ ಪ್ರಯೋಗಗಳನ್ನು ಮಂಜುನಾಥ್ ಮಾಡುತ್ತಿರುವುದು 'ಸಿ.ಕೆ. ಜೇಡನ ಆತ್ಮಚರಿತ್ರೆ'ಯಲ್ಲೂ ಮೇಲುನೋಟಕ್ಕೆ ತಿಳಿಯುತ್ತದೆ. ದೃಶ್ಯಗಳನ್ನು ಪ್ರತಿಮಾತ್ಮಕವಾಗಿ ಸೃಷ್ಟಿಸುವ ಮಂಜುನಾಥ್ ಮುಂದಿನ ಕಾದಂಬರಿಗಳಲ್ಲಿ ಒಂದೇ ಕೇಂದ್ರವಿರುವ ವಸ್ತುವನ್ನು ಹೇಗೆ ತರುತ್ತಾರೆ ಎಂಬ ಪ್ರಶ್ನೆಯನ್ನು ಈ ಕಾದಂಬರಿ ಓದುಗರ ಮುಂದಿಡುತ್ತದೆ.

**ಸುರೇಶ ನಾಗಲಮಡಿಕೆ:** ಹೊಸತಲೆಮಾರಿನ ಬರಹಗಾರ. 'ಮುತ್ತು ಬಂದಿದೆ ಕೇರಿಗೆ', 'ತಕ್ಕಮಣ್ಣಿನ ತೇವಕ್ಕಾಗಿ', 'ಕಾಣ್ಕೆಕಣ್ಕಟ್ಟು', 'ಬಯಲಾಗುವ ಪರಿ', ಹೊಸತಲೆಮಾರಿನ ಕಾವ್ಯ ಕುರಿತ 'ಹಲವು ಬಣ್ಣದ ಹಗ್ಗ', ಕೆ.ಎಸ್.ನ ಕಾವ್ಯ ಕುರಿತ 'ಉಳಿದದ್ದು ಆಕಾಶ' ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನ ವಿವೇಕಾನಂದ ಪದವಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ.